All India Radio: Bangalore
National Bulletin In Kannada
16.10.2026  19.35 hrs

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
16.10.2026  19.35 hrs

<>><><*><><<>

ಮುಖ್ಯಾಂಶಗಳು

೧. ಪಿಎಂ-ಸೇತು ರಾಷ್ಟ್ರೀಯ ಸಂಚಾಲನ ಸಮಿತಿ ಸಭೆ; ೧ ಸಾವಿರದ ೯೪ ಕೋಟಿ ರೂಪಾಯಿ ಹೂಡಿಕೆ ಯೋಜನೆಗೆ ಅನುಮೋದನೆ

೨. ಜನಗಣತಿ ತಿದ್ದುಪಡಿ ನಿಯಮಗಳು-೨೦೨೬ ಜಾರಿಗೆ ಕೇಂದ್ರ ಗೃಹ ಸಚಿವಾಲಯ ಅಧಿಕೃತ ಅಧಿಸೂಚನೆ

೩. ದೆಹಲಿಯ ಪ್ರಮುಖ ಮಾರುಕಟ್ಟೆಗಳಲ್ಲಿ ಪ್ರತಿಭಟನೆ ನಿಷೇಧಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ವರ್ತಕರ ಮನವಿ

೪. ಕಚ್ಚಾ ತೈಲ ಆಮದು ವೈವಿಧ್ಯೀಕರಣ; ಭಾರತದ ನಡೆಯನ್ನು ಶ್ಲಾಘಿಸಿದ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆ-ಐಎಂಎಫ್

೫. ಮಹಿಳಾ ಅಂತಾರಾಷ್ಟ್ರೀಯ ಟಿ-೨೦ ಕ್ರಿಕೆಟ್; ಜಿಂಬಾಬ್ವೆ ವಿರುದ್ಧ ಟಾಸ್ ಗೆದ್ದು ಭಾರತ ಫೀಲ್ಡಿಂಗ್ ಆಯ್ಕೆ

<>><><*><><<>

ಪ್ರಧಾನ್ ಮಂತ್ರಿ ಉನ್ನತೀಕರಿಸಿದ ಐಟಿಐಗಳ ಮೂಲಕ ಕೌಶಲ್ಯ ಮತ್ತು ಉದ್ಯೋಗಾರ್ಹತೆಯ ಪರಿವರ್ತನೆ ಪಿಎಂ-ಸೇತು ಯೋಜನೆಯ ರಾಷ್ಟ್ರೀಯ ಸಂಚಾಲನಾ ಸಮಿತಿಯ ಆರನೇ ಸಭೆಯಲ್ಲಿಂದು ಮಹಾರಾಷ್ಟ್ರ, ಒಡಿಶಾ ಹಾಗೂ ಜಮ್ಮು-ಕಾಶ್ಮೀರದ ಐದು ಐಟಿಐ ಕ್ಲಸ್ಟರ್‌ಗಳಿಗೆ ಸುಮಾರು ೧ ಸಾವಿರದ ೯೪ ಕೋಟಿ ರೂಪಾಯಿ ಮೌಲ್ಯದ ಹೂಡಿಕೆ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಈ ನೂತನ ಅನುಮೋದನೆಗಳೊಂದಿಗೆ ಪಿಎಂ-ಸೇತು ಯೋಜನೆಯಡಿ ಅನುಮೋದಿಸಲಾದ ಒಟ್ಟು ಹೂಡಿಕೆಯು ೩ ಸಾವಿರದ ೬೮೭ ಕೋಟಿ ರೂಪಾಯಿಗಳಿಗೂ ಅಧಿಕವಾಗಿದೆ ಎಂದು ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯ ತಿಳಿಸಿದೆ. ಸಭೆಯನ್ನುದ್ದೇಶಿಸಿ ಮಾತನಾಡಿದ ಸಚಿವಾಲಯದ ಕಾರ್ಯದರ್ಶಿ ದೇಬಶ್ರೀ ಮುಖರ್ಜಿ, ಈ ಅನುಮೋದನೆಗಳು ಐಟಿಐಗಳನ್ನು ಬಲಪಡಿಸಲು, ತರಬೇತಿಯ ಗುಣಮಟ್ಟವನ್ನು ಹೆಚ್ಚಿಸಲು ಮತ್ತು ಉದ್ಯಮ ಕ್ಷೇತ್ರದ ಭಾಗವಹಿಸುವಿಕೆಯನ್ನು ವಿಸ್ತರಿಸಲು ನೆರವಾಗಲಿವೆ ಎಂದು ಹೇಳಿದ್ದಾರೆ.

<>><><*><><<>

ಕೇಂದ್ರ ಗೃಹ ಸಚಿವಾಲಯವು ೧೯೪೮ರ ಜನಗಣತಿ ಕಾಯ್ದೆಯಡಿ ನೂತನ 'ಜನಗಣತಿ ತಿದ್ದುಪಡಿ ನಿಯಮಗಳು ೨೦೨೬' ಅನ್ನು ಜಾರಿಗೆ ತಂದಿದ್ದು, ಈ ಕುರಿತು ಅಧಿಕೃತ ಗೆಜೆಟ್ ಅಧಿಸೂಚನೆಯನ್ನು ಹೊರಡಿಸಿದೆ.  ಈ ತಿದ್ದುಪಡಿಯ ಮೂಲಕ ಜನಗಣತಿ ಕಾರ್ಯ ಕೈಗೊಳ್ಳುವ ಸಿಬ್ಬಂದಿಯ ಅರ್ಹತಾ ಪಟ್ಟಿಯನ್ನು ವಿಸ್ತರಿಸಲಾಗಿದ್ದು, ರಾಜ್ಯ ಸರ್ಕಾರಗಳು ಅಥವಾ ಕೇಂದ್ರಾಡಳಿತ ಪ್ರದೇಶಗಳು ಸೂಕ್ತವೆಂದು ಪರಿಗಣಿಸುವ ಶಿಕ್ಷಕರು, ಸರ್ಕಾರಿ ಅಧಿಕಾರಿಗಳು, ಸ್ಥಳೀಯ ಸಂಸ್ಥೆಗಳ ಸಿಬ್ಬಂದಿ ಹಾಗೂ ಇತರೆ ವ್ಯಕ್ತಿಗಳನ್ನು ಸೇರ್ಪಡೆಗೊಳಿಸಲಾಗಿದೆ. ಸರ್ಕಾರಿ, ಸ್ಥಳೀಯ ಸಂಸ್ಥೆ, ಅನುದಾನಿತ ಮತ್ತು ಅನುದಾನರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳು ಹಾಗೂ ವಿವಿಧ ಟ್ರಸ್ಟ್ ಅಥವಾ ಸೊಸೈಟಿಗಳಿಂದ ನಡೆಸಲ್ಪಡುವ ಸಂಸ್ಥೆಗಳ ಶಿಕ್ಷಕರನ್ನು ಜನಗಣತಿ ಕಾರ್ಯಕ್ಕೆ ನೇಮಕ ಮಾಡಿಕೊಳ್ಳಬಹುದಾಗಿದೆ.

<>><><*><><<>

ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಸಮ್ಮುಖದಲ್ಲಿ ಕರ್ನಾಟಕದ ಕಾರವಾರದ ಐಎನ್‌ಎಸ್ ಕದಂಬ ನೌಕಾನೆಲೆಯಲ್ಲಿ ಭಾರತೀಯ ನೌಕಾಪಡೆಗೆ ಇಂದು ಸ್ವದೇಶಿ ನಿರ್ಮಿತ ಬಹುಪಯೋಗಿ ಹಡಗು 'ಸಮರ್ಥಕ್' ಸೇರ್ಪಡೆಯಾಗಿದೆ. ಈ ವೇಳೆ ಮಾತನಾಡಿದ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್, ಐಎನ್‌ಎಸ್ ಕದಂಬ ನೌಕಾನೆಲೆಯಲ್ಲಿ ನಡೆಯುತ್ತಿರುವ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಗಳು, ಭಾರತೀಯ ನೌಕಾಪಡೆಯ ಸಾಮರ್ಥ್ಯವನ್ನು ಮತ್ತಷ್ಟು ಹೆಚ್ಚಿಸಲಿವೆ ಎಂದು ತಿಳಿಸಿದ್ದಾರೆ. ನೌಕಾನೆಲೆಯಲ್ಲಿ ಹಡಗುಗಳ ನಿರ್ವಹಣಾ ಸೌಲಭ್ಯ, ನೌಕಾ ವಾಯುನೆಲೆ ಮತ್ತು ಆಧುನಿಕ ಡಾಕ್‌ಯಾರ್ಡ್ ಸೇರಿದಂತೆ ವಿವಿಧ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದಿದ್ದಾರೆ.

<>><><*><><<>

ಇತ್ತೀಚೆಗೆ ನಡೆದ ಪ್ರತಿಭಟನೆಗಳಿಂದ ಉಂಟಾಗಿರುವ ಭಾರಿ ಆರ್ಥಿಕ ನಷ್ಟವನ್ನು ಸರಿದೂಗಿಸಲು ಮತ್ತು ತಮ್ಮ ಜೀವನೋಪಾಯವನ್ನು ರಕ್ಷಿಸಲು ಮಧ್ಯಪ್ರವೇಶಿಸುವಂತೆ ನವದೆಹಲಿಯ ವಿವಿಧ ವ್ಯಾಪಾರಿ ಸಂಘಟನೆಗಳು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಮನವಿ ಮಾಡಿವೆ. ಈ ಕುರಿತು ಪ್ರಧಾನಿಯವರಿಗೆ ಜಂಟಿ ಪತ್ರ ಬರೆದಿರುವ ವರ್ತಕರ ಒಕ್ಕೂಟಗಳು, ಈ ತಿಂಗಳ ೧೦ ರಂದು ನೀಡಲಾಗಿದ್ದ ಪ್ರತಿಭಟನೆಯ ಕರೆಯು ಮಾರುಕಟ್ಟೆಗಳಲ್ಲಿ ಭೀತಿ ಮತ್ತು ಅಸ್ತವ್ಯಸ್ತ ವಾತಾವರಣವನ್ನು ಸೃಷ್ಟಿಸಿತ್ತು. ಇದರಿಂದಾಗಿ ಕಾರ್ಯಕ್ರಮದ ಮುಂಚಿತವಾಗಿ ಹಾಗೂ ನಂತರದ ೪ ರಿಂದ ೫ ದಿನಗಳ ಕಾಲ ಪ್ರಮುಖ ಮಾರುಕಟ್ಟೆಗಳಿಗೆ ಗ್ರಾಹಕರು ಬರದಂತಾಗಿ ಭಾರಿ ನಷ್ಟ ಸಂಭವಿಸಿದೆ ಎಂದು ವಿವರಿಸಿವೆ. ಪ್ರಸ್ತುತ ಹಬ್ಬದ ಋತು ನಡೆಯುತ್ತಿರುವುದರಿಂದ ಸಾರ್ವಜನಿಕರನ್ನು ಹಾಗೂ ಸ್ಥಳೀಯ ಆರ್ಥಿಕತೆಯನ್ನು ರಕ್ಷಿಸಲು ಕ್ರಮಕೈಗೊಳ್ಳುವಂತೆ ಸರ್ಕಾರಕ್ಕೆ ಆಗ್ರಹಿಸಲಾಯಿತು. ದೆಹಲಿಯ ಪ್ರಮುಖ ವಾಣಿಜ್ಯ ಪ್ರದೇಶಗಳಲ್ಲಿ ಎಲ್ಲಾ ರೀತಿಯ ಪ್ರತಿಭಟನೆ ಮತ್ತು ಮೆರವಣಿಗೆಗಳನ್ನು ತಕ್ಷಣವೇ ನಿಷೇಧಿಸಬೇಕೆಂದು ಪ್ರಧಾನಮಂತ್ರಿಗಳು, ಕೇಂದ್ರ ಸರ್ಕಾರ ಹಾಗೂ ನ್ಯಾಯಾಂಗಕ್ಕೆ ವರ್ತಕರ ಸಂಘಟನೆಗಳು ಒತ್ತಾಯಿಸಿವೆ.

<>><><*><><<>

ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಅವರು ಇದೇ ೧೯ ಮತ್ತು ೨೦ ರಂದು ಮುಂಬೈನಲ್ಲಿ ಯುಎಇ ವಿದೇಶಾಂಗ ಸಚಿವ ಶೇಕ್ ಅಬ್ದುಲ್ಲಾ ಬಿನ್ ಜಾಯೆದ್ ಅಲ್ ನಹ್ಯಾನ್ ಅವರನ್ನು ಆತಿಥ್ಯ ನೀಡಿ ಸ್ವಾಗತಿಸಲಿದ್ದಾರೆ. ನವದೆಹಲಿಯಲ್ಲಿ ಮಾಧ್ಯಮಗಳಿಗೆ ಮಾಹಿತಿ ನೀಡಿದ ವಿದೇಶಾಂಗ ಸಚಿವಾಲಯದ ವಕ್ತಾರ ರಣ್‌ಧೀರ್ ಜೈಸ್ವಾಲ್, ಭಾರತ-ಯುಎಇ ಸಮಗ್ರ ಕಾರ್ಯತಂತ್ರ ಪಾಲುದಾರಿಕೆಯಡಿ ಇಂಧನ, ವ್ಯಾಪಾರ, ಹೂಡಿಕೆ, ಫಿನ್‌ಟೆಕ್, ರಕ್ಷಣೆ ಹಾಗೂ ಸಂಪರ್ಕ ಕ್ಷೇತ್ರಗಳಲ್ಲಿನ ದ್ವಿಪಕ್ಷೀಯ ಸಹಕಾರವನ್ನು ಉಭಯ ನಾಯಕರು ಪರಿಶೀಲಿಸಲಿದ್ದಾರೆ ಎಂದು ತಿಳಿಸಿದ್ದಾರೆ. ಇದರ ಜೊತೆಗೆ, ಸಚಿವ ಡಾ.ಜೈಶಂಕರ್, ಇದೇ ೨೦ ರಂದು ಮುಂಬೈನಲ್ಲಿ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಅವರೊಂದಿಗೂ ಚರ್ಚೆ ನಡೆಸಲಿದ್ದಾರೆ.

<>><><*><><<>

ಪಶ್ಚಿಮ ಏಷ್ಯಾ ಸಂಘರ್ಷದ ನಡುವೆಯೂ ಭಾರತವು ತನ್ನ ಕಚ್ಚಾ ತೈಲ ಪೂರೈಕೆ ಮೂಲಗಳನ್ನು ವೈವಿಧ್ಯಗೊಳಿಸುವ ಮೂಲಕ ಜಾಗತಿಕ ಇಂಧನ ಮಾರುಕಟ್ಟೆಯ ಏರಿಳಿತಗಳನ್ನು ಯಶಸ್ವಿಯಾಗಿ ನಿಭಾಯಿಸಿದೆ ಎಂದು ಅಂತಾರಾಷ್ಟ್ರೀಯ ಹಣಕಾಸು ನಿಧಿ-ಐಎಂಎಫ್ ತಿಳಿಸಿದೆ.  ಭಾರತ ಪರ್ಯಾಯ ದೇಶಗಳಿಂದ ತೈಲ ಪಡೆದು ಪೂರೈಕೆಯನ್ನು ಸಹಜ ಸ್ಥಿತಿಗೆ ತಂದಿರುವುದನ್ನು ಐಎಂಎಫ್ ತನ್ನ ೨೦೨೬ರ ಅಕ್ಟೋಬರ್ ತಿಂಗಳ 'ಏಷ್ಯಾ ಮತ್ತು ಪೆಸಿಫಿಕ್ ಪ್ರಾದೇಶಿಕ ಆರ್ಥಿಕ ನೋಟ' ವರದಿಯಲ್ಲಿ ಉಲ್ಲೇಖಿಸಿದೆ. ಆದರೆ, ಇಂಧನ ಬೆಲೆಗಳು ದೀರ್ಘಕಾಲದವರೆಗೆ ಹೆಚ್ಚಾಗಿಯೇ ಉಳಿದರೆ ಹೊಸ ಹಣದುಬ್ಬರ ಒತ್ತಡ ನಿರ್ಮಾಣವಾಗಬಹುದು ಎಂದು ಐಎಂಎಫ್ ಎಚ್ಚರಿಸಿದೆ. ಕಚ್ಚಾ ತೈಲಕ್ಕಿಂತ ಡೀಸೆಲ್ ಹಾಗೂ ವಿಮಾನ ಇಂಧನದ ಬೆಲೆಗಳು ತೀವ್ರವಾಗಿ ಏರಿಕೆ ಕಂಡಿದ್ದು, ಇದು ಉತ್ಪಾದನೆ ಮತ್ತು ಸಾರಿಗೆ ವೆಚ್ಚವನ್ನು ಹೆಚ್ಚಿಸಿ ಆರ್ಥಿಕ ಬೆಳವಣಿಗೆಯ ಮೇಲೆ ಪರಿಣಾಮ ಬೀರಬಹುದು ಎಂದು ವರದಿ ತಿಳಿಸಿದೆ.

<>><><*><><<>

’ಜನ ಸೇವೆಯಿಂದ ದೇಶ ಸೇವೆ’ ಎಂಬ ಮಂತ್ರದಡಿ ಜನರ ಏಳಿಗೆಯ ಅಚಲ ಬದ್ಧತೆಯೊಂದಿಗೆ, ಸಾರ್ವಜನಿಕ ಸೇವೆಯ ೨೫ ವರ್ಷಗಳ ಪಯಣವನ್ನು ಪ್ರಧಾನಿ ನರೇಂದ್ರ ಮೋದಿ ಪೂರೈಸಿದ್ದಾರೆ.  ಸೇವೆ ಮತ್ತು ಸುಶಾಸನದ ದೂರದೃಷ್ಟಿಯೊಂದಿಗೆ ಸರ್ಕಾರ, ೨೦೪೭ರ ವೇಳೆಗೆ ’ವಿಕಸಿತ ಭಾರತ’ ಗುರಿ ಸಾಧನೆಯತ್ತ ಸಾಗುತ್ತಿದೆ. ಅದರ ಭಾಗವಾಗಿ, ಹಲವು ವಲಯಗಳಲ್ಲಿ ಕೈಗೊಂಡ ಮಹತ್ವದ ಸುಧಾರಣೆಗಳ ಕುರಿತ ಸರಣಿಯನ್ನು ಆಕಾಶವಾಣಿ ಪ್ರಸಾರ ಮಾಡುತ್ತಿದೆ. ಇಂದಿನ ಆವೃತ್ತಿಯಲ್ಲಿ ’ಮೇರಾ ಯುವ ಭಾರತ್- ಮೈ ಭಾರತ್’ ಕುರಿತ ಒಂದು ವರದಿ ಇಲ್ಲಿದೆ. ವಿಶ್ವದಲ್ಲೇ ಅತ್ಯಧಿಕ ಯುವ ಜನಸಂಖ್ಯೆಯನ್ನು ಹೊಂದಿರುವ ಭಾರತದಲ್ಲಿ, ಈ ಹಿಂದೆ ಯುವಜನರಿಗಾಗಿ ನೆಹರೂ ಯುವ ಕೇಂದ್ರ ಸಂಘಟನೆ ಮತ್ತು ರಾಷ್ಟ್ರೀಯ ಸೇವಾ ಯೋಜನೆಯಂತಹ ಪ್ರತ್ಯೇಕ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದವು. ಈ ಎಲ್ಲಾ ಪ್ರತ್ಯೇಕ ವ್ಯವಸ್ಥೆಗಳನ್ನು ಒಂದೇ ಸೂರಿನಡಿ ತರುವ ಉದ್ದೇಶದಿಂದ ೨೦೨೩ರ ಅಕ್ಟೋಬರ್‌ನಲ್ಲಿ ’ಮೇರಾ ಯುವ ಭಾರತ್’ ಎಂಬ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಈ ಏಕೀಕೃತ ವೇದಿಕೆಯಲ್ಲಿ ಯುವಜನರು ಒಮ್ಮೆ ನೋಂದಾಯಿಸಿಕೊಳ್ಳುವ ಮೂಲಕ ಕೌಶಲ್ಯ ಅಭಿವೃದ್ಧಿ, ಸ್ವಯಂಸೇವೆ ಹಾಗೂ ನಾಯಕತ್ವ ತರಬೇತಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಡಿಜಿಟಲ್ ದತ್ತಾಂಶ ವ್ಯವಸ್ಥೆಯು, ಸರ್ಕಾರದ ವಿವಿಧ ಕಾರ್ಯಗಳಿಗೆ ತಕ್ಕಂತೆ ಸೂಕ್ತ ಸ್ವಯಂಸೇವಕರನ್ನು ನೇಮಿಸಲು ನೆರವಾಗುವುದಲ್ಲದೆ, ಯುವಕರಿಗೆ ತಮ್ಮ ಸೇವಾ ಚಟುವಟಿಕೆಗಳ ದೃಢೀಕೃತ ದಾಖಲೆಯನ್ನು ಒದಗಿಸುತ್ತದೆ. ಪ್ರಸ್ತುತ ಸುಮಾರು ೨.೫ ಕೋಟಿಗೂ ಹೆಚ್ಚು ಯುವಕರು ಈ ವೇದಿಕೆಯಲ್ಲಿ ನೋಂದಾಯಿಸಿಕೊಂಡಿದ್ದಾರೆ. ಈ ಮೂಲಕ ’ಮೇರಾ ಯುವ ಭಾರತ್’ ಸಂಸ್ಥೆಯು ಯುವಜನರ ಸಕ್ರಿಯ ಭಾಗವಹಿಸುವಿಕೆ ಮತ್ತು ನಾಯಕತ್ವ ವೃದ್ಧಿಗೆ ನೆರವಾಗುವುದರೊಂದಿಗೆ, ದೇಶ ನಿರ್ಮಾಣ ಕಾರ್ಯದಲ್ಲಿ ಯುವಶಕ್ತಿಯನ್ನು ತೊಡಗಿಸಿಕೊಳ್ಳುತ್ತಿದೆ.

<>><><*><><<>

ರಾಷ್ಟ್ರೀಯ ಭದ್ರತೆ ಪಡೆ- ಎನ್‌ಎಸ್‌ಜಿಯ ಸಂಸ್ಥಾಪನಾ ದಿನದ ಸಂದರ್ಭದಲ್ಲಿ ಪಡೆಯ ಸಮಸ್ತ ಸಿಬ್ಬಂದಿಗೆ ಪ್ರಧಾನಿ ನರೇಂದ್ರ ಮೋದಿ ಶುಭಾಶಯ ಕೋರಿದ್ದಾರೆ. ಎನ್‌ಎಸ್‌ಜಿ ಪಡೆಯ ಯೋಧರು, ಧೈರ್ಯ, ನಿಕರತೆ ಮತ್ತು ಕರ್ತವ್ಯದೆಡೆಗೆ ಅಚಲ ಬದ್ಧತೆ ಹೊಂದಿದ್ದಾರೆ ಎಂದು ಸಾಮಾಜಿಕ ಮಾಧ್ಯಮ ಸಂದೇಶದಲ್ಲಿ ಪ್ರಧಾನಿ ಶ್ಲಾಘಿಸಿದ್ದಾರೆ.

<>><><*><><<>

ಭಾರತ ಮತ್ತು ಮಂಗೋಲಿಯಾ ರಕ್ಷಣಾ ಸಚಿವಾಲಯಗಳ ಜಂಟಿ ಕಾರ್ಯಕಾರಿ ಗುಂಪಿನ ೧೪ನೇ ಸಭೆಯು ಉಲಾನ್‌ಬಾತರ್‌ನಲ್ಲಿ ನಡೆಯಿತು. ರಕ್ಷಣಾ ಸಚಿವಾಲಯದ ಜಂಟಿ ಕಾರ್ಯದರ್ಶಿ ಡಾ.ಇಷಿತಾ ಗಂಗೂಲಿ ತ್ರಿಪಾಠಿ ಮತ್ತು ಮಂಗೋಲಿಯಾದ ರಕ್ಷಣಾ ಉಪ ರಾಜ್ಯ ಕಾರ್ಯದರ್ಶಿ ಬ್ರಿಗೇಡಿಯರ್ ಜನರಲ್ ಗನ್ಸುಖ್ ಇ. ಸಭೆಯ ಸಹ-ಅಧ್ಯಕ್ಷತೆ ವಹಿಸಿದ್ದರು. ಈ ಸಭೆಯಲ್ಲಿ ಪ್ರಸ್ತುತ ರಕ್ಷಣಾ ಸಹಕಾರ ಚಟುವಟಿಕೆಗಳು ಹಾಗೂ ’ನೊಮಾಡಿಕ್ ಎಲಿಫೆಂಟ್’ ಸೇನಾ ಅಭ್ಯಾಸದ ಯಶಸ್ಸನ್ನು ಪರಿಶೀಲಿಸಲಾಯಿತು.

<>><><*><><<>

ಬ್ಯಾಂಕಾಕ್‌ನಲ್ಲಿ ನಡೆಯುತ್ತಿರುವ ಐಎಂಎಫ್-ವಿಶ್ವಬ್ಯಾಂಕ್ ವಾರ್ಷಿಕ ಸಭೆಯ ಹಿನ್ನೆಲೆಯಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಜಪಾನ್ ಅಂತಾರಾಷ್ಟ್ರೀಯ ಸಹಕಾರ ಬ್ಯಾಂಕ್-ಜೆಬಿಐಸಿ ಗವರ್ನರ್ ಕಜುಹಿಕೊ ಅಮಕಾವಾ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದರು.  ಈ ಸಭೆಯಲ್ಲಿ ಶುದ್ಧ ಇಂಧನ, ಸೆಮಿಕಂಡಕ್ಟರ್, ಕೃತಕ ಬುದ್ಧಿಮತ್ತೆ ಹಾಗೂ ವಿದ್ಯುತ್ ಚಾಲಿತ ವಾಹನ ಕ್ಷೇತ್ರಗಳಲ್ಲಿ ಸಹಕಾರವನ್ನು ವಿಸ್ತರಿಸಲು ತೀರ್ಮಾನಿಸಲಾಯಿತು. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಇದೇ ೧೮ರವರೆಗೆ ಥೈಲ್ಯಾಂಡ್‌ನ ಬ್ಯಾಂಕಾಕ್‌ನಲ್ಲಿ ನಡೆಯಲಿರುವ ವಾರ್ಷಿಕ ಸಭೆಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

<>><><*><><<>

ಮುಸ್ಲಿಂ ವೈಯಕ್ತಿಕ ಕಾನೂನಿನಡಿ ಪ್ರಸ್ತುತವಿರುವ ಎಲ್ಲಾ ರೀತಿಯ ವಿಚ್ಛೇದನ ಪದ್ಧತಿಗಳಿಗೆ ಏಕರೂಪದ ಕಾನೂನಾತ್ಮಕ ನಿಯಮಗಳನ್ನು ರೂಪಿಸುವಂತೆ ಕೋರಿ ಸಲ್ಲಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್, ಕೇಂದ್ರ ಸರ್ಕಾರಕ್ಕೆ ನೋಟಿಸ್ ನೀಡಿದೆ.  ಸುಪ್ರಿಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಹಾಗೂ ನ್ಯಾಯಮೂರ್ತಿ ಜೋಯ್ಮಾಲ್ಯ ಬಾಗ್ಚಿ ಅವರಿದ್ದ ಪೀಠ, ಈ ಅರ್ಜಿಯನ್ನು, ತಲಾಖ್-ಎ-ಹಸನ್ ಪದ್ಧತಿಯ ಸಿಂಧುತ್ವವನ್ನು ಪ್ರಶ್ನಿಸಿ ಈಗಾಗಲೇ ಬಾಕಿ ಇರುವ ಅರ್ಜಿಯೊಂದಿಗೆ ಸಂಯೋಜಿಸಿ ವಿಚಾರಣೆಗೆ ಸ್ವೀಕರಿಸಿದೆ.

<>><><*><><<>

ನವ ರಾಯಪುರದಲ್ಲಿ ಇಂದು ನಡೆಯುತ್ತಿರುವ ಭಾರತ ಮತ್ತು ಜಿಂಬಾಬ್ವೆ ನಡುವಿನ ಮೂರು ಪಂದ್ಯಗಳ ಮಹಿಳಾ ಅಂತಾರಾಷ್ಟ್ರೀಯ ಟಿ-೨೦ ಕ್ರಿಕೆಟ್ ಸರಣಿಯ ಮೊದಲನೇ ಪಂದ್ಯದಲ್ಲಿ ಟಾಸ್ ಗೆದ್ದ ಭಾರತ ತಂಡ ಫೀಲ್ಡಿಂಗ್ ಆಯ್ದುಕೊಂಡಿದೆ. ಪಂದ್ಯದ ಆರಂಭಕ್ಕೂ ಮುನ್ನ ಇತ್ತೀಚಿಗೆ ನಿಧನರಾದ ಜಿಂಬಾಬ್ವೆಯ ಮಾಜಿ ಕ್ರಿಕೆಟ್ ಆಟಗಾರ್ತಿ ಹಾಗೂ ಅಂಪೈರ್ ಸಾರಾ ದಂಬಾನೆವಾನ ಅವರ ಸ್ಮರಣಾರ್ಥ ಒಂದು ನಿಮಿಷದ ಮೌನಾಚರಣೆ ಮಾಡಲಾಯಿತು.

<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>

<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ ><><<>